ಮಾನ್ಯ ಜಯಪ್ರಕಾಶ ನಾರಾಯಣ್ ಅವರು ನಾನು ಕೊಟ್ಟ ಉತ್ತರಕ್ಕೆ ತಮ್ಮದೇ ಆದ ರೂಪವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಖಾಸಗಿ ಕಾರ್ಖಾನೆ, ಖಾಸಗಿ ಕಾರ್ಖಾನೆಗೆ ರಿಕ್ಯೂಟ್‌ಮೆಂಟ್ ಮಾಡುವ ವಿಚಾರದಲ್ಲಿ ಸರ್ಕಾರಕ್ಕೆ ಯಾವ ವಿಧವಾದ ನೇರ ಹತೋಟಿ ಇಲ್ಲ. ಎಂದು ನಾನು ಹೇಳಿದೆ. ಆದರೂ ನಮ್ಮ ಥೋರಣ್ ಏನಿದೆ ಅದನ್ನು ನಾವು ಖಾಸಗಿ ಕಾರ್ಖಾನೆಯವರಿಗೂ ತಿಳಿಸಿದ್ದೇವೆ, ಸಾರ್ವಜನಿಕ ಉದ್ದಿಮೆಗಳಿಗೂ ತಿಳಿಸಿದ್ದೇವೆ. ಆದುದರಿಂದ ಪ್ರತಿಯೊಂದು ಕಾರ್ಖಾನೆಯೂ ಕೂಡ ನಮ್ಮ ಸಮಾಜದಲ್ಲಿರುವ ದಲಿತವರ್ಗದವರ ಬಗ್ಗೆ ಕೂಡ ಅನುಕಂಪಪಟ್ಟು ಅವರಿಗೆ ಸಾಕಾದಷ್ಟು ಪ್ರಾತಿನಿಧ್ಯವನ್ನು ಕಾರ್ಖಾನೆಗಳಲ್ಲಿ ಕೊಡಬೇಕಾಗಿರ ತಕ್ಕದ್ದು, ಬಹಳ ಅಗತ್ಯ, ಅದು ನೈತಿಕ ಜವಾಬ್ದಾರಿ ಎನ್ನತಕ್ಕದ್ದು ಸರ್ಕಾರದ ದೃಷ್ಟಿ.

ಶ್ರೀ ಕೋಣಂದೂರು ಲಿಂಗಪ್ಪ.—ಸಕ್ಕರೆ ಉತ್ಪಾದನೆ ಕಡಮೆಯಾಗುವುದಕ್ಕೆ ಭತ್ತದ ಬೆಲೆಗಳು ಜಾಸ್ತಿಯಾದುದರಿಂದ ಭತ್ತವನ್ನು ಹೆಚ್ಚು ಬೆಳೆದದ್ದೇ ಕಾರಣ ಎಂದು ಹೇಳಿದ್ದಾರೆ. ಆದರೆ ಅಲ್ಲಿನ ರೈತರ ಕಬ್ಬನ್ನು ಕಾರ್ಖಾನೆಯವರು ತೆಗೆದುಕೊಳ್ಳದೆ ಸತಾಯಿಸಿ ರೈತರು ಹಿರಿಯೂರು ಮತ್ತು ಪಾಂಡವಪುರದವರೆಗೂ ಕಬ್ಬನ್ನು ಮಾರಾಟ ಮಾಡಲಿಕ್ಕೆ ಹೋಗಿರುವುದನ್ನು ರುಜುವಾತು ಮಾಡಿ ಕೊಟ್ಟರೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ? ಕಾರ್ಖಾನೆಯವರಿಗೆ 1522 ಎಕರೆ ಭೂಮಿಯನ್ನು ಕೊಟ್ಟಿದ್ದರೂ ಅದಕ್ಕೆ ಎರಡರಷ್ಟು ಭೂಮಿ ಅವರ ಕೈಯಲ್ಲಿದೆ. ಅವರು ಅದನ್ನು ಎಕರೆಗೆ ಐದು ಸಾವಿರ ರೂಪಾಯಿಗಳ ಪ್ರಕಾರ ಕಾಗದಪತ್ರವಿಲ್ಲದೆ ಮಾರಾಟ ಮಾಡುತ್ತಿದ್ದಾರೆ. ಅದನ್ನು ಸರ್ಕಾರದ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಎಸ್. ಎಂ. ಕೃಷ್ಣ.—ಭೂಸುಧಾರಣೆ ಕಾನೂನು ಜಾರಿಗೆ ಬಂದ ಮೇಲೆ ಅವರು ಏನು ಮಾರಾಟ ಮಾಡಿದ್ದರೂ ಕೂಡ ಅದು ತಾನೇ ತಾನಾಗಿ ರದ್ದಾಗುತ್ತದೆ. ಮಾನ್ಯ ರೆವೆನ್ಯೂ ಸಚಿವರು ಸದನಕ್ಕೆ ತಿಳಿಸಿರುವ ಹಾಗೆ ನಮಗೆ ಬಂದಿರತಕ್ಕ ವರ್ತಮಾನದಂತೆ ಅವರು ಐದು ಎಕರೆ ಭೂಮಿಯನ್ನು ಮಾತ್ರ ಒತ್ತುವರಿ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ನಾವು ಕ್ರಮ ತೆಗೆದು ಕೊಂಡು ಆ ಒತ್ತುವರಿಯನ್ನು ಬಿಡಿಸುತ್ತೇವೆ ಮತ್ತು ಭೂಸುಧಾರಣಾ ಕಾನೂನಿನ ಚೌಕಟ್ಟಿಗೆ ಇದು ಕೂಡ ಬರತಕ್ಕದ್ದು ಪಾನ್ತವವಾಗಿದೆ.

ಅಧ್ಯಕ್ಷರು.—ಶ್ರೀ ಬಿ. ಬೈರಪ್ಪಾಜಿಯವರ ಪ್ರಶ್ನೆ ನಂ. 495 ನ್ನು ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ ಅವರು ಕೇಳಬಹುದು.

Misappropriation of Funds in the State Khadi and Village Industries Board

495 **Sri M. H. JAYAPRKASH NARAYANA** (Sirsi) [On behalf of Sri Byrappaji (Turuvekere)].—

Will the Minister for Industries and Parliamentary Affairs be pleased to state.—

(*a*) the amount misappropriated in the State Khadi and Village Industries Board;

(*b*) whether it has come to the notice of the Government that many Co-operative Societies which were started under the aegis of the Board have closad by misappropriating the funds;

(*c*) if so, the steps taken by the Government to activate them ?

Sri S. M. KRISHNA (Minister for Industries and Parliamentary Affaris).—

(*a*) It is estimated that about Rs. 6.13 lakhs has been misappropriated.

(*b*) Yes.

(*c*) Executive Committees in respect of 31 societies have been superseded and Administrators appointed. Recommendation is being made to provide financial assistance from the Khadi Commission to the suitable societies after detailed enquiry of the affairs of the superseded societies. Snpervisors have been appointed for careful supervision of the affairs of such Societies.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇದರಲ್ಲಿ ಸುಮಾರು ಆರು ಲಕ್ಷಗಳಿಗೆ ಮೇಲ್ಪಟ್ಟು ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಈ ಖಾದಿ ಬೋರ್ಡ್ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇದರಲ್ಲಿ ದುರುಪಯೋಗವಾಗುತ್ತಿದೆ. ಇದರಲ್ಲಿ ಎಷ್ಟು ಸಹಕಾರ ಸಂಘಗಳಲ್ಲಿ ದುರುಪಯೋಗವಾಗಿದೆ ? ದುರುಪಯೋಗವಾಗಿರುವುದು ಎಷ್ಟು ? ಮತ್ತು ಇತರ ಕಡೆಗಳಲ್ಲಿ ಎಷ್ಟು ದುರುಪಯೋಗವಾಗಿದೆ ಇದರ ವಿವರಗಳನ್ನು ತಿಳಿಸಲಾಗುತ್ತದೆಯೇ ?

† ಶ್ರೀ ಎಸ್. ಎಂ. ಕೃಷ್ಣ.—ಈಗಾಗಲೇ ಈ ಸದನದಲ್ಲಿ ಖಾದಿ ಮಂಡಲಿಯ ಅವ್ಯವಹಾರಗಳ ಬಗ್ಗೆ ಬಂದಿರತಕ್ಕ ಟೀಕೆ ಟಿಪ್ಪಣಿಗಳನ್ನು ಗಮನಿಸಿ ಸರಕಾರದವರು ಈಗ ಒಬ್ಬರು ಅಧಿಕಾರಿಯನ್ನು ಇದರ ತನಿಖೆ ಮಾಡಲು ನೇಮಿಸಿದೆ. ಈ ತನಿಖಾಧಿಕಾರಿಗಳು ಖಾದಿ ಮಂಡಲಿಯ ಎಲ್ಲ ವ್ಯವಹಾರಗಳ ವಿಷಯವಾಗಿ ಕೂಲಂಕಷವಾಗಿ ತನಿಖೆಮಾಡಿ ಅನಂತರ ಒಂದು ವರದಿಯನ್ನು ಸರಕಾರಕ್ಕೆ ಕೊಡುವವರಾಗಿದ್ದಾರೆ. ಆ ವರದಿ ಸಭೆಯ ಮುಂದೆ ಬಂದಾಗ ಇದರಲ್ಲಿ ಏನು ಅಪವ್ಯಯಗಳಾಗಿವೆ ಇನ್ನೂವೆ ದುರ್ವ್ಯವಹಾರಗಳು ಆಗಿವೆ ಮತ್ತು ಇದರಲ್ಲಿ ಆಗಿವೆಯೇ ಇಲ್ಲವೇ ಸಹಕಾರ ಸಂಘಗಳಲ್ಲಿ ಆಗಿವೆಯೇ ಎನ್ನುವ ಎಲ್ಲ ವಿಚಾರಗಳ ಬಗ್ಗೆ ಹೆಚ್ಚು ಬೆಳಕು ಈ ವರದಿ ಬಂದ ಮೇಲೆ ಗೊತ್ತಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಉತ್ತರದಲ್ಲಿ 31 ಸಂಘ ಸಂಸ್ಥೆಗಳ ಕಾರ್ಯಕಾರಿ ಸಮಿತಿಗಳನ್ನು ರದ್ದುಗೊಳಿಸಿ ಆಡಳಿತ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಹೇಳಿದ್ದೀರಿ. ಆಡಳಿತಾಧಿಕಾರಿಗಳನ್ನು ನೇಮಿಸಿದ ಮೇಲೆ ಹಿಂದೆ ಇಲ್ಲಿ ಆಗಿರುವ ದುರುಪಯೋಗಗಳ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರೆ ಅವನ್ನೂ ತನಿಖಾಧಿಕಾರಿಗಳ ವರದಿ ಇದುವುದು ಒಳ್ಳೆಯದಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—31 ಸೊಸೈಟಿಗಳಲ್ಲೂ ಆಗಿದ್ದ ಖಾದಿ ಮಂಡಲಿಯವರು ಖಾನಗಿಯವರನ್ನು ನೇಮಿಸಿದ್ದರು. ಇದರಲ್ಲಿ ಏನಾದರೂ ದುರುಪಯೋಗಗಳಾಗಿವೆಯೇ ಇಲ್ಲವೆ ಎನ್ನುವ ಎಲ್ಲ ಅಂಕೆ ಅಂಶಗಳನ್ನೂ ಈಗಿನ ತನಿಖಾಕಾರಿಗಳ ಮುಂದೆ ಇಡಲಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಖಾದಿ ಬೋರ್ಡಿನಲ್ಲಿ ಹಿಂದೆ ಒಂದು ಕಮಿಟಿ ಮಾಡಿ ಆಗ ಎನ್‌ಕ್ವೈರಿ ಮಾಡಿದ ಒಂದು ರಿಪೋರ್ಟ್ ಸರಕಾರದಲ್ಲಿದೆ. ಆ ರಿಪೋರ್ಟಿನ ಮೇಲೆ ಏನಾದರೂ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಯೇ ಇಲ್ಲವೇ ? ಆಗ ಕೊಟ್ಟಿರುವ ರಿಪೋರ್ಟಿನಲ್ಲಿ ಕೆಲವು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಸೂಚನೆಗಳನ್ನು ಕೊಟ್ಟಿದ್ದರೂ ಅದರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ? ಈಗ ಮತ್ತೆ ಒಬ್ಬರು ಅಧಿಕಾರಿಗಳನ್ನು ತನಿಖೆ ಮಾಡಲು ನೇಮಿಸಿರುವುದರಿಂದ ಇವರ ರಿಪೋರ್ಟ್ ಬಂದ ಮೇಲೆ ಕೂಡ ಇದನ್ನ ಹಿಂದಿನಂತೆಯೇ ಮೂಲೆಗೆ ಹಾಕುತ್ತಾರೆಯೇ ? ಹೇಗೆ ?

ಶ್ರೀ ಎಸ್. ಎಂ. ಕೃಷ್ಣ.—ಹಿಂದೆ ನಡೆದಿರತಕ್ಕ ಎಲ್ಲ ನಡವಳಿಕೆಗಳನ್ನೂ ಮತ್ತು ಎಲ್ಲ ತನಿಖಾ ರಿಪೋರ್ಟ್‌ಗಳನ್ನೂ ಈಗ ನಾವು ನೇಮಿಸಿರತಕ್ಕ ಅಧಿಕಾರಿಗಳಿಗೆ ಕೊಟ್ಟು ಅವುಗಳನ್ನು ಪರಿಶೀಲಿಸಿದ ನಂತರ ಅವರು ತಮಗೆ ಸರಿ ತೋರುವ ಶಿಫಾರಸುಗಳನ್ನು ಮಾಡಿ ವರದಿ ಕೊಡುತ್ತಾರೆ.

Sri S. A. PATIL.—May I know whether any misappropriation cases are pending in the Criminal Courts ?

Sri S. M. KRISHNA.—I want notice to answer this supplementary question.

ಶ್ರೀ ಜಿ. ಪುಟ್ಟಸ್ವಾಮಿ.—ಇಲ್ಲಿ ಒಬ್ಬರು ಅಧಿಕಾರಿಗಳನ್ನು ನೇಮಿಸಿದ್ದೀರಿ ಎಂದು ಹೇಳಿದಿರಿ. ಇವರ ಹೆಸರೇನು ? ಮತ್ತು ಯಾವಾಗ ಇವರನ್ನು ನೇಮಕ ಮಾಡಲಾಯಿತು !

ಶ್ರೀ ಎಸ್. ಎಂ. ಕೃಷ್ಣ.—ಯಾವಾಗ ನೇಮಕ ಮಾಡಿದೆ ಎನ್ನುವ ಸರಕಾರದ ಆರ್ಡರು ಈಗ ನನ್ನಲ್ಲಿಲ್ಲ. ನಿವೃತ್ತ ಐ. ಎ. ಎಸ್. ಅಧಿಕಾರಿ ಶ್ರೀಮಾನ್ ವೈ. ಹೊಂಬಾಳಯ್ಯ, ಎನ್ನುವವರನ್ನು ಇಲ್ಲಿಗೆ ತನಿಖಾಧಿಕಾರಿಗಳೆಂದು ನೇಮಕ ಮಾಡಲಾಗಿದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಇದರಲ್ಲಿ ಸುಮಾರು 6.13ಲಕ್ಷ ರೂಪಾಯಿಗಳು ದುರುಪಯೋಗವಾಗಿವೆ ಎಂದು ಹೇಳಿರುವುದಿಲ್ಲ ಸುಮಾರು 10—16 ಪರ್ಸ್ ಕೋರ್ಟುಗಳಲ್ಲಿ ಕೇಸುಗಳಾಗಿವೆ. ಇವುಗಳಲ್ಲಿ ಎಷ್ಟೋ ನಷ್ಟಗಳಾಗಿವೆ. ಇದರ ಜೊತೆಗೆ ಯಾರು ಇದರಲ್ಲಿ ದುರುಪಯೋಗ ಮಾಡಿದ್ದರೋ ಅಂತಹವರನ್ನೇ ಮತ್ತೆ ಬೋರ್ಡಿನವರು ಇಲ್ಲಿ ನೇಮಕ ಮಾಡಿರುತ್ತಾರೆ. ಇದಲ್ಲದೆ ಸಹಕಾರ ಸಂಘಗಳಲ್ಲೂ ಇಂತಹವರನ್ನು ನೇಮಕಮಾಡಿದ್ದಾರೆ. ಈಗ ನೇಮಕ ಮಾಡಿರುವ ಸಮಿತಿಗೆ ಇವನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೆ ಪ್ರತಿಯೊಬ್ಬರಿಗೂ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಯಾವುದಾದರೂ ನಿರ್ದಿಷ್ಟವಾದ ವಿಚಾರಗಳಿದ್ದರೆ ಅವನ್ನು ತನಿಖಾಧಿಕಾರಿಗಳಿಗೆ ತಿಳಿಸಬಹುದು. ಅಂತಹ ವಿವರಗಳನ್ನು ನಮಗೆ ಕಳುಹಿಸಿ ಕೊಟ್ಟರೆ ನಾವು ಅದನ್ನು ತನಿಖಾಧಿಕಾರಿಗಳಿಗೆ ಕಳುಹಿಸಿಕೊಡುತ್ತೇವೆ ಮತ್ತು ಖಾದಿ ಮಂಡಲಿಯ ಅಧ್ಯಕ್ಷರಿಗೂ ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ನಂ. 556ನ್ನು ತಡೆಹಿಡಿಯಲಾಗಿದೆ. ಈಗ ಶ್ರೀ ಪಿ. ಎ. ಪಾವಷೆ ಯವರು ಶ್ರೀ ಸರ್‌ದೇಸಾಯಿಯವರ ಪ್ರಶ್ನೆ 561ನ್ನು ಕೇಳಬಹುದು.

RELEASE OF WASTE LAND IN KHANAPUR TALUK

561. Sri P. A. PAWASHE (Uchagaon) [on behalf of Sri N. B. Sirdesai (Khanapur)].—

Will the Minister for Revenue be pleased to state :—

(*a*) the total acreage of Revenue waste land granted to landless persons in Khanapur Taluk since 1967 on the recommendation of the Consultative Committee for the disposal of land grant cases, and the extent of land granted without the recommedation of the said Committee ;

(*b*) the total acreage for which parties (Grantees) have paid measurement fees and out of the total acreage, the acreage of which the Assistant Superintendent of Land Records has effected measurement to this date ?